therefore I recommend that the First Grade College may be please be sanctioned at Molakalamuru. Earlier orders of the Government may please be obtained and communicated."

This was in June 1982.

ಆದಾದಮೇಲೆ ನಾನು ನಮ್ಮ ಮುಂತ್ರಿಗಳನ್ನು ಕೇಳಿಕೊಂಡಿದ್ದೇನೆ. ನಮ್ಮದು ತೀರಾ ಹಿಂದುಳಿದ ಪ್ರದೇಶವೆಂದು ಹೇಳಿದ್ದೇನೆ. ಇದುವರೆಗೂ ಏನೂ ಆಗಿಲ್ಲ. ಮೊನ್ನೆ ಕೂಡ ೨೭-೨-೮೪ ರಲ್ಲಿ ಕೇಳಿದ್ದೇನೆ. ಇದಕ್ಕೆ ಮುಂಜಿ ೧೭-೩-೮೩ರಲ್ಲಿ ಕೇಳಿದ್ದೆ. ನನ್ನ ಕ್ಷೇತ್ರದಲ್ಲಿ ಸುಮಾರು ಆರವತ್ತು ಸಾವಿರ ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದ ಜನರು ಇದ್ದಾರೆ. ಆದ್ದರಿಂದ ಪ್ರಥಮ ದರ್ಜೆ ಕಾಲೇಜನ್ನು ಕೊಡಲೇಬೇಕೆಂದು ಹೇಳುತ್ತೇನೆ. ಕಾಲೇಜಿಗೆ ಸ್ಥಳ ಬೇಕಾದರೆ ನಾವು ಕೊಡುತ್ತೇವೆ. ಸ್ಥಳ ರೆಡಿಯಾಗಿದೆ. ನಾವು ಬಹಳ ಹೀನ ಸ್ಥಿತಿಯಲ್ಲಿದ್ದೇವೆ. ಬಡವರಾಗಿದ್ದೇವೆ. ನಮ್ಮ ಹುಡುಗರು ಆಟ್ಲೀಸ್ಟ್ ಒಂದು ಗ್ರಾಜುಯೇಟ್ ಆದರೆ ಏನಾದರೂ ಮುಂದುವರಿಯುತ್ತಾರೆಂದು ನನ್ನ ಅಭಿಲಾಷೆ. ಮಾನ್ಯ ಮುಂತ್ರಿಗಳು ಇದರ ಬಗ್ಗೆ ಶ್ರದ್ಧೆವಹಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ. ಏಕೆಂದರೆ ನಾವು ಹಿಂದುಳಿದ ಜನ, ಬಹಳ ನೊಂದುಕೊಂಡು ಕೇಳುತ್ತಿದ್ದೇವೆ. ಇಷ್ಟೆಲ್ಲಾ ಹೇಳಿದರೂ ಅವರ ಮನಸ್ಸಿಗೆ ಬಂದಿಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರಾದ ನಾಯಕ್‌ರವರ ಶಾಸನ ಸಭಾ ಸದಸ್ಯತ್ವದ ಕಾಲಾವಧಿಯಲ್ಲೇ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಎನ್. ಜಿ. ನಾಯಕ್.—ಈ ವರ್ಷವೇ, ಸ್ಪೆಷಲ್ ಗ್ರಾಂಟ್‌ನಲ್ಲಿ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ನಾಲ್ಕು ವರ್ಷದ ಅವಧಿಯಲ್ಲಿ ಇರುವವರು ಯಾರು, ಹೋಗುವವರು ಯಾರು ಎಂದು ಗೊತ್ತಿಲ್ಲ.

ಶ್ರೀ ಬಿ. ರಾಚಯ್ಯ.—ಮಾನ್ಯ ಚಿಕ್ಕೇಗೌಡರಿಗೆ ಹೇಳಿದಂಥ ಉತ್ತರವನ್ನೇ ಇವರಿಗೆ ಹೇಳ ಬೇಕಾಗುತ್ತದೆ. ಹೊಸದಾಗಿ ಫಸ್ಟ್‌ಗ್ರೇಡ್ ಕಾಲೇಜುಗಳನ್ನು ತೆರೆಯಬೇಕಾಗಿದ್ದರೆ, ವಿಶ್ವವಿದ್ಯಾ ನಿಲಯಕ್ಕೆ ನಾವು ಅರ್ಜಿ ಹಾಕಿಕೊಳ್ಳಬೇಕು. ಅದು ಆಗಿಲ್ಲ.

ಅಧ್ಯಕ್ಷರು.—ಅದು ಆಗದಿದ್ದರೆ, ನಾಯಕ್‌ರವರ ಅವಧಿಯನ್ನು ಬೇಗ ಮುಗಿಸುವುದಕ್ಕೆ ಪ್ರಯತ್ನ ಮಾಡಿ, ಆಷ್ಟರೊಳಗೆ ಕಾಲೇಜನ್ನು ಕೊಡಿ.

ಶ್ರೀ ಎನ್. ಜಿ. ನಾಯಕ್.—ಮಾನ್ಯ ವಿದ್ಯಾಸಚಿವರು ಬಹಳ ನಿಷ್ಠಾವಂತರು. ಅದು ನನಗೆ ಗೊತ್ತಿದೆ. ಆದರೆ ಅವರು ಏಕೆ ಹೀಗೆ ಮಾಡುತ್ತಾರೋ ಗೊತ್ತಿಲ್ಲ.

ಶ್ರೀ ಬಿ. ರಾಚಯ್ಯ.—ಇದರಲ್ಲಿ ರಾಜಕೀಯ ಉದ್ದೇಶ ಏನೂ ಇಲ್ಲ. ಮೊಳಕಾಲ್ಮೂರು ಬ್ಯಾಕ್‌ವರ್ಡ್ ಏರಿಯಾ. ಅಲ್ಲಿ ಕಾಲೇಜನ್ನು ಸ್ಥಾಪನೆ ಮಾಡಬೇಕೆಂಬ ಉದ್ದೇಶ ಇದೆ. ಸ್ವಲ್ಪ ತಡವಾಗಿದೆ ಅಷ್ಟೆ.

ಶಿವಮೊಗ್ಗ ಜಿಲ್ಲೆಯಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಕುರಿತು

೪೫೩. (೮೮೨) ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ (ಸಾಗರ್) ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮುಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯನ್ವಯ ಶಿವಮೊಗ್ಗ ಜಿಲ್ಲೆಯಲ್ಲಿ ೧೯೮೨ ಮತ್ತು ೧೯೮೩ನೇ ಸಾಲುಗಳ ಅಂತ್ಯಕ್ಕೆ ಸಾಧಿಸಿದ ತಾಲ್ಲೂಕುವಾರು ಪ್ರಗತಿಯ ವಿವರಗಳೇನು?

ಆ) ಹಿಂದಿನ ವರ್ಷ ಸದರಿ ಯೋಜನೆಯನ್ವಯ ಸಾಲ ತೆಗೆದುಕೊಂಡು ಮರುಪಾವತಿ ಮಾಡಿದಂತಹ ರೈತರಿಗೆ ಹೊಸದಾಗಿ ಸಾಲ ಕೊಡಲು ಅವಕಾಶವಿದೆಯೆ, ಹಾಗಿದ್ದಲ್ಲಿ ಆ ರೀತಿ ಎಷ್ಟು ಜನರಿಗೆ ಸಾಲ ಕೊಡಲಾಗಿದೆ? (ತಾಲ್ಲೂಕುವಾರು ವಿವರಗಳನ್ನೊದಗಿಸುವುದು)

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು)

ಅ) ಶಿವಮೊಗ್ಗ ಜಿಲ್ಲೆಯಲ್ಲಿ ೧೯೮೨ ಮತ್ತು ೧೯೮೩ರಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ತಾಲ್ಲೂಕುವಾರು ವಿವರವಾದ ಪ್ರಗತಿಯನ್ನು ಅನುಬಂಧ-೧ರಲ್ಲಿ ನಮೂದಿಸಲಾಗಿದೆ.

ಆ) ಹೌದು, ಪ್ರಯೋಜನದಾರರು ಬ್ಯಾಂಕಿನಿಂದ ತಾವು ತೆಗೆದುಕೊಂಡ ಸಾಲವನ್ನು ನಿಗದಿತ ಕಂತುಗಳಲ್ಲಿ ಮರುಪಾವತಿ ಮಾಡಿದಲ್ಲಿ ಅಂತಹ ಪ್ರಯೋಜನದಾರರು ಈ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ವಯ ಗರಿಷ್ಠ ೩,೦೦೦ ರೂ. ಸಹಾಯ ಧನವನ್ನು ಪುನಃ ಪಡೆಯಲು ಅರ್ಹರಾಗುತ್ತಾರೆ. ವಿವರಗಳನ್ನು ಅನುಬಂದ ೨ರಲ್ಲಿ ನಮೂದಿಸಲಾಗಿದೆ.

ಅನುಬಂಧ—೧

ಶಿವಮೊಗ್ಗ ಜಿಲ್ಲೆಯಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ೧೯೮೨ ಮತ್ತು ೧೯೮೩ನೇ ಸಾಲುಗಳ ತಾಲ್ಲೂಕುವಾರು ಪ್ರಗತಿಯ ವಿವರ.

ಕ್ರಮ ಸಂಖ್ಯೆ	ತಾಲ್ಲೂಕುಗಳು	೧೯೮೨ (೧೯೮೧-೮೨)		೧೯೮೩ (೧೯೮೨-೮೩)	
		ಪ್ರಯೋಜನ ಪಡೆದ ಒಟ್ಟು (ಪ್ರಯೋಜನದಾರರು)	ಸಹಾಯಧನ ಮತ್ತು ಸ್ಥಿರ ಸವಲತ್ತುಗಳು	ಪ್ರಯೋಜನ ಪಡೆದ ಒಟ್ಟು ಪ್ರಯೋಜನದಾರರು	ಸಹಾಯಧನ ಮತ್ತು ಸ್ಥಿರ ಸವಲತ್ತುಗಳು
೧.	ಭದ್ರಾವತಿ	೧,೪೬೧	೮,೬೨,೦೯೭	೨,೦೨೨	೧೫,೨೧,೪೧೯
೨.	ಚನ್ನಗಿರಿ	೪೪೧	೪,೪೫,೯೬೫	೧,೩೬೯	೯,೬೩,೫೯೭
೩.	ಹೊಸನಗರ	೪೩೪	೨,೦೮,೨೮೭	೬೭೨	೪,೬೪,೭೪೦
೪.	ಹೊನ್ನಾಳಿ	೫೦೫	೪,೫೧,೪೧೦	೧,೩೯೯	೮,೮೯,೨೫೭
೫.	ಸಾಗರ	೮೩೪	೧,೯೮,೬೭೨	೧,೯೩೨	೧೨,೮೨,೦೦೪
೬.	ಶಿವಮೊಗ್ಗ	೧,೧೨೭	೬,೮೩,೩೫೯	೨,೭೩೪	೨೨,೦೧,೩೨೩
೭.	ಸೊರಬ	೨೭೫	೫೦,೧೫೯	೯೧೭	೭,೬೬,೨೦೬
೮.	ಶಿಕಾರಿಪುರ	೫೩೬	೩,೫೦,೦೫೯	೧,೩೬೨	೧೦,೦೦,೧೬೫
೯.	ತೀರ್ಥಹಳ್ಳಿ	೮೭೯	೩,೦೮,೭೭೬	೨,೫೯೨	೧೪,೨೧,೧೦೩
	ಒಟ್ಟು	೬,೪೯೨	೩೫,೫೮,೭೮೪	೧೪,೯೯೯	೧,೦೫,೦೮,೭೯೪

ಅನುಬಂಧ—೨

ಪ್ರಯೋಜನದಾರರು, ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಅನ್ವಯ ಸಾಲವನ್ನು ಬ್ಯಾಂಕುಗಳಿಗೆ ಮರು ಪಾವತಿ ಮಾಡಿದ ಮತ್ತು ಎರಡನೇ ಬಾರಿಗೆ ಪ್ರಯೋಜನದಾರರು ಬ್ಯಾಂಕುಗಳಿಂದ ಸಾಲವನ್ನು ತೆಗೆದುಕೊಂಡ ವಿವರ.

ಕ್ರಮ ಸಂಖ್ಯೆ	ತಾಲ್ಲೂಕುಗಳು	ತಮ್ಮ ಬ್ಯಾಂಕಿನ ಸಾಲವನ್ನು ಮರು ಪಾವತಿ ಮಾಡಿದ (ಹಿಂತಿರುಗಿಸಿದ) ಪ್ರಯೋಜನದಾರರ ಒಟ್ಟು ಸಂಖ್ಯೆ)		ಎರಡನೇ ಬಾರಿಗೆ ಬ್ಯಾಂಕಿನಿಂದ ಸಾಲವನ್ನು ತೆಗೆದುಕೊಂಡ ಒಟ್ಟು (ಪ್ರಯೋಜನದಾರರ ಸಂಖ್ಯೆ)	
		೧೯೮೨ (೧೯೮೧–೮೨)	೧೯೮೩ (೧೯೮೨–೮೩)	೧೯೮೨ (೧೯೮೧–೮೨)	೧೯೮೩ (೧೯೮೨–೮೩)
೧.	ಭದ್ರಾವತಿ	೫	೧೧	೪	೯
೨.	ಚನ್ನಗಿರಿ	೩	೯	೫	೭
೩.	ಹೊಸನಗರ	೫	೯	೪	೭
೪.	ಹೊನ್ನಾಳಿ	೫	೬	೬	೪
೫.	ಸಾಗರ	೪	೧೦	೪	೪
೬.	ಶಿವಮೊಗ್ಗ	೧೨	೫೮	೧೨	೫೮
೭.	ಸೊರಬ	೫	೧೫	೪	೧೪
೮.	ಶಿಕಾರಿಪುರ	೧೨	೪೪	೨೭	೨೮
೯.	ತೀರ್ಥಹಳ್ಳಿ	೩೫	೧೦೪	೧೦	೨೬
	ಒಟ್ಟು	೮೬	೨೬೭	೭೭*	೧೫೭**

*ಈ ಸಂಖ್ಯೆಗಳು, ಹೈನಾಭಿವೃದ್ಧಿ ವಿಷಯಕ್ಕೆ ಅನ್ವಯಿಸುವುದಿಲ್ಲ. **ಹೈನಾಭಿವೃದ್ಧಿ ಪ್ರಗತಿಗೆ ಪ್ರಯೋಜನದಾರರು ಮೊದಲು ಸಲ ಸಾಲ ಪಡೆದು ಸಾಲದಿಂದ ಹಸುವನ್ನು ಕೊಂಡಿದ್ದರೂ ಸಹಿತ, ಪ್ರಯೋಜನದಾರರು ತಮ್ಮ ಮೊದಲ ಸಾಲ ತೀರಿಸುವ ಮುನ್ನವೇ, ಆ ಹಸುವು ಬಿತ್ತಿಹೋದರೆ, ಪ್ರಯೋಜದಾರರಿಗೆ ಬೇರೆ ಹಸುವನ್ನು ಕೊಂಡುಕೊಳ್ಳಲು, ಬ್ಯಾಂಕುಗಳಿಂದ ೨ನೇ ಬಾರಿಗೆ ಸಾಲ ಕೊಡಿಸಲಾಗುವುದು. ಇದುವರೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು ೭೦೦ ಪ್ರಯೋಜನದಾರರು ಈ ತರಹದ ಸೌಲಭ್ಯವನ್ನು ಪಡೆದಿರುತ್ತಾರೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಸನ್ಮಾನ್ಯ ಅಧ್ಯಕ್ಷರೇ, ನಾನು ಕೇಳಿರತಕ್ಕಂಥ ಪ್ರಶ್ನೆ, ೧೯೮೨ನೇ ವರ್ಷದ ಕೊನೆಗೆ, ಆರ್ಥಿಕ ವರ್ಷದ ಕೊನೆಗಲ್ಲ, ೧೯೮೨ನೇ ಡಿಸೆಂಬರ್ ಕೊನೆಗೆ ಹಾಗೂ ೧೯೮೩ನೇ ಡಿಸೆಂಬರ್ ಕೊನೆಗೆ ಎಷ್ಟು ಎಂದು. ಈ ಪ್ರಶ್ನೆ ಕೇಳಿರುವ ಉದ್ದೇಶ, ಐ. ಆರ್. ಡಿ. ಪ್ರೋಗ್ರಾಂನಲ್ಲಿ ೧೯೮೨ರ ಡಿಸೆಂಬರ್ ಕೊನೆಗೆ ಎಷ್ಟಾಗಿತ್ತು? ೧೯೮೩ರ ಡಿಸೆಂಬರ್ ಕೊನೆಗೆ ಎಷ್ಟಾಗಿತ್ತು ಎಂದು ಕೇಳಿರತಕ್ಕಂಥದ್ದು. ಅದಕ್ಕೆ ಈ ರೀತಿಯ ಅಂಕಿಅಂಶಗಳನ್ನು ಕೊಡುವುದಕ್ಕೆ ಸಾಧ್ಯವೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಸ್ವಾಮಿ ಮಾನ್ಯ ಸದಸ್ಯರ ಪ್ರಶ್ನೆ ಆ ರೀತಿ ಇಲ್ಲ. ೧೯೮೨ ಮತ್ತು ೧೯೮೩ನೇ ಸಾಲಿನಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆ ಅನ್ವಯ ಸಾಧಿಸಿದ ತಾಲ್ಲೂಕುವಾರು ಪ್ರಗತಿಯ ವಿವರಗಳೇನು? ಎಂದು ಇದೆ. ವರ್ಷದ ಅಂತ್ಯ ಎಂದು ಹೇಳಿದರೆ, ಸರಕಾರದ ವ್ಯವಹಾರದಲ್ಲಿ ಆರ್ಥಿಕ ವರ್ಷದ ಅಂತ್ಯ ಎಂದರೆ ಮಾರ್ಚ್ ಅಂತ್ಯ ಎಂದಾಗುತ್ತದೆ. ಮಾನ್ಯ ಸದಸ್ಯರು ಡಿಸೆಂಬರ್ ತಿಂಗಳ ಅಂತ್ಯದ ಪ್ರಗತಿ ಕೇಳಿದ್ದರೆ, ಅದು ನನ್ನ ಮುಂದೆ ಇಲ್ಲ. ತರಿಸಿಕೊಡುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ.—ಮಾನ್ಯ ಅಧ್ಯಕ್ಷರೇ, ನಾನು ಕೇಳುವುದು ಇಷ್ಟೆ. ೧೯೮೨ನೇ ಡಿಸೆಂಬರ್ ಕೊನೆಗೆ ಆವಂಥ ಪ್ರಗತಿ, ೧೯೮೩ನೇ ಡಿಸೆಂಬರ್ ಕೊನೆಗೆ ಆಗಿಲ್ಲ. ನಾವು ಆಗಲೇ ಇದರ ಬಗ್ಗೆ ರಿವ್ಯೂ ಮಾಡಿದ್ದೇವೆ. ಆರ್ಥಿಕ ವರ್ಷದ ಕೊನೆ ಅಂದರೆ ಇನ್ನು ಒಂದು ಅಥವಾ ಅರ್ಧ ತಿಂಗಳು ಇದೆ. ಹೋದ ವರ್ಷಕ್ಕೆ ಕಡಿಮೆ ಇಲ್ಲದಷ್ಟು ಪ್ರಗತಿಯನ್ನು ಈ ಮಾರ್ಚ್ ಕೊನೆಯಲ್ಲಾದರೂ ಸಾಧನೆ ಮಾಡುವುದಕ್ಕೆ ಆದೇಶ ಕೊಡುತ್ತೀರಾ? ಏಕೆಂದರೆ ಈ ಪ್ರಗತಿ ಸಾಧಿಸದೆ ಇರುವುದರಿಂದ ಬಡವರಿಗೆ ಸಿಗುವ ಪ್ರಯೋಜನ ಕಡಿಮೆಯಾಗಬಾರದು. ನಿಗದಿತ ಪ್ರಗತಿಯನ್ನಾದರೂ ಸಾಧಿಸಲಿಕ್ಕೆ ಆದೇಶ ಕೊಡುತ್ತೀರಾ? ಪ್ರಗತಿ ಸಾಧನೆ ಆಗದೇ ಇದ್ದರೆ ಯಾರ ಲೋಪ ಇದೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಹಾಲು ಕರೆಯುವ ಹಸುಗಳು ಬರಡಾವರೆ, ಎರಡನೇ ಸಲ ಸಾಲ ಕೊಡಬೇಕೆಂದು ತಮ್ಮ ಉತ್ತರದಲ್ಲಿ ಇದೆ. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಪ್ರಕಾರ ಒಟ್ಟು ೭೦೦ ಜನರಿಗೆ ಎರಡನೇ ಸಲ ಕೊಟ್ಟಿದ್ದೇವೆ ಎಂದು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಇದು ಸರಿಯಾದ ಸಂಖ್ಯೆ ಅಲ್ಲ. ಎರಡನೇ ಸಲ ಸಾಲ ಕೊಡುವುದಕ್ಕೆ ಬ್ಯಾಂಕ್‌ನವರು ಬಹಳ ಅಲಕ್ಷ್ಯ ಮಾಡುತ್ತಿದ್ದಾರೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಿಗದಿಪಡಿಸದ ಗುರಿ ಮುಟ್ಟುವುದರಲ್ಲಿ ಯಾವುದೇ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದರೆ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ಈಗಾಗಲೇ ಈಗಾಗಲೇ ಅದರ ಬಗ್ಗೆ ವಿಮರ್ಶೆ ಮಾಡಿ, ಕಾಲಕ್ಕೆ ಸರಿಯಾಗಿ ನಿಗದಿ ಮುಟ್ಟಬೇಕು ಎಂದು ಅಧಿಕಾರಿಗಳಿಗೆ ಸ್ಪಷ್ಟವಾಗಿ ನಾವು ಆದೇಶ ಕೊಟ್ಟಿದ್ದೇವೆ. ಈ ಮಾರ್ಚಿವರೆಗೆ ಅವರು ನಿಗದಿತ ಗುರಿಯನ್ನು ಪೂರ್ಣವಾಗಿ ಮುಟ್ಟುತ್ತಾರೆ ಎಂಬ ಭರವಸೆ ಇದೆ. ಏನು ಗುರಿ ಇಟ್ಟುಕೊಂಡಿದ್ದೇವೆ ಅದನ್ನು ಮಾರ್ಚಿ ಒಳಗೆ ಮುಟ್ಟಬೇಕು. ಮುಟ್ಟದೇ ಹೋದರೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ. ನಿಗದಿತ ಗುರಿ ಮುಟ್ಟುತ್ತೇವೆಂಬ ಭರವಸೆ ನನಗೆ ಇದೆ.

ಇನ್ನು ಎರಡನೇ ಸಲ ಸಾಲವನ್ನು ೭೦೦ ಜನರಿಗೆ ಕೊಟ್ಟಿದ್ದೇವೆಂದು ಹೇಳಿದ್ದೇನೆ. ಇದನ್ನು ಕೊಡುವುದಕ್ಕೆ ಬ್ಯಾಂಕ್‌ನವರು ಹಿಂದೆ ಮುಂದೆ ನೋಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ಎರಡನೇ ಸಾಲ ಕೊಡುವುದರಲ್ಲಿ ಎರಡು ವಿಧ ಇದೆ. ಇದರಲ್ಲಿ ರೈತರಿಗೆ ದೊರಕುವ ಸಬ್ಸಿಡಿ ಮೂರು ಸಾವಿರ ರೂಪಾಯಿಗಳು ಮಾತ್ರ. ಮೊದಲನೇ ಸಲ ಸಾಲ ತೆಗೆದುಕೊಳ್ಳುವಾಗ ಎರಡು ಸಾವಿರ ರೂಪಾಯಿಗಳ ಸಬ್ಸಿಡಿ ತೆಗೆದುಕೊಂಡರೆ, ಎರಡನೇ ಸಲ ಸಾಲ ತೆಗೆದುಕೊಳ್ಳುವಾಗ ಒಂದು ಸಾವಿರ ರೂಪಾಯಿ ಮಾತ್ರ ಸಬ್ಸಿಡಿ ದೊರಕುತ್ತದೆ. ಮೊದಲನೇ ಸಲವೇ ಮೂರು ಸಾವಿರ ರೂಪಾಯಿಗಳನ್ನೂ ತೆಗೆದುಕೊಂಡರೆ ಹೊಸದಾಗಿ ಸಾಲ ತೆಗೆದುಕೊಳ್ಳುವಾಗ ಸಬ್ಸಿಡಿ ಬರುವುದಿಲ್ಲ. ಒಟ್ಟು ಅಂಕಿಸಂಖ್ಯೆ ನಾವು ಕೊಟ್ಟಿದ್ದೇವೆ. ಬ್ಯಾಂಕ್‌ನಿಂದ ಅಸಹಕಾರ ಆಗುತ್ತಿದೆ ಎಂದು ಹೇಳಿದರೆ ನಾವು ಮಾಡಿರುವಕ್ಕಿಂತ ವಿಧಾನದಲ್ಲಿ, ಜಿಲ್ಲಾಮಟ್ಟದಲ್ಲಿ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳ ಜೊತೆ ಮೂರು ತಿಂಗಳಿಗೆ ಒಂದು ಸಲ ಸಮಾಲೋಚನೆ ನಡೆಸಬೇಕು ಎಂದು ಮಾಡಿದ್ದೇವೆ. ರಾಜ್ಯಮಟ್ಟದಲ್ಲಿ ಬ್ಯಾಂಕ್ ಅಧಿಕಾರಿಗಳ ಸಹಕಾರ ಇಲ್ಲ ಎಂದು ಕಂಡು ಬಂದರೆ ಬ್ಯಾಂಕ್ ಅಧಿಕಾರಿಗಳನ್ನು ಕರೆಯಿಸಿ ಆದೇಶ ಕೊಡುತ್ತೇನೆ. ಬ್ರಾಂಚ್ ಮ್ಯಾನೇಜರ್‌ಗಳು ಸರಿಯಾದ ರೀತಿಯಲ್ಲಿ ವರ್ತನೆ ಮಾಡುತ್ತಿಲ್ಲ ಎಂದು ಹೇಳಿದ್ದೀರಿ. ಈ ಬಗ್ಗೆ ಬ್ಯಾಂಕ್‌ನ ಹಿರಿಯ ಅಧಿಕಾರಿಗಳನ್ನು ಕರೆಯಿಸಿ, ಮುಖ್ಯ ಮಂತ್ರಿಗಳ ಮೂಲಕ ಆದೇಶ ಕೊಡಿಸುತ್ತೇನೆ.

ಗುಬ್ಬಿ ತಾಲ್ಲೂಕಿನ ಚೇಳೂರಿನಲ್ಲಿರುವ ಮಹಾತ್ಮ ಗಾಂಧಿ ಶಿಕ್ಷಣ ಸಂಸ್ಥೆ

೪೫೪. (೧೪೫೦) ಶ್ರೀ ಟಿ. ಹೆಚ್. ಹನುಮಂತರಾಯಪ್ಪ (ಬೆಳ್ಳಾವಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಗುಬ್ಬಿ ತಾಲ್ಲೂಕು ಚೇಳೂರು ಗ್ರಾಮದ ಮಹಾತ್ಮಾ ಗಾಂಧಿ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರು ಹಾಗೂ ವಿದ್ಯಾರ್ಥಿಗಳ ಮೇಲೆ ಅನೇಕ ದಂಡ ಪ್ರಕರಣ ಮೊಕದ್ದಮೆಗಳನ್ನು ಹೂಡಿರುವುದು ಸರಕಾರದವರ ಗಮನಕ್ಕೆ ಬಂದಿದೆಯೆ.

(ಆ) ಹಾಗಿದ್ದಲ್ಲಿ ಯಾರ ಯಾರ ಮೇಲೆ ಮೊಕದ್ದಮೆಗಳನ್ನು ಹೂಡಲಾಗಿದೆ ಮತ್ತು ಹೊಡಿರುವ ಮೊಕದ್ದಮೆಗಳೆಷ್ಟು,

(ಇ) ಈ ಶಿಕ್ಷಣ ಸಂಸ್ಥೆಯಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲು ಸರಕಾರದವರು ಕೈಕೊಂಡ ಕ್ರಮಗಳೇನು?